

ಒಂದು ವರ್ಷದ ಹಿಂದೆ ಬಸ್ಯಾ ಕಳೆದುಹೋಗಿದ್ದ. ಗಾಬರಿಗೊಂಡಿದ್ದ ಅಪ್ಪ ಬಸ್ಯಾನ ಫೋಟೊವನ್ನು ವಾಟ್ಸಾಪ್ ಗ್ರೂಪ್‌ಗಳಿಗೆಲ್ಲಾ ಹಾಕಿದ. ಹಲವಾರು ಗ್ರೂಪ್‌ಗಳಲ್ಲಿ ಫೋಟೊ ಹರಿದಾಡಿತು. ಒಂದೇ ವಾರದಲ್ಲಿ ಬಸ್ಯಾನನ್ನು ಹುಡುಕಿ ತಂದು ಮನೆಗೆ ಬಿಟ್ಟರು. ಆದರೆ ವಾಟ್ಸಾಪ್‌ಗಳಲ್ಲಿ ಫೋಟೊ ಹರಿದಾಡುವುದು ಮಾತ್ರ ನಿಲ್ಲಲಿಲ್ಲ. ಈಗಲೂ ಬಸ್ಯಾ ಮನೆಯಿಂದ ಹೊರಗೆ ಹೋದರೆ, ಆತನನ್ನು ನೋಡಿದ ಜನರು ಮನೆಗೆ ತಂದು ಬಿಡುತ್ತಲೇ ಇದ್ದಾರೆ.

★★★

ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದ ತನ್ನ ಕುಟುಂಬವನ್ನು ಬಸ್ಯಾ ಈ ರೀತಿ ಪರಿಚಯ ಮಾಡಿಕೊಟ್ಟ...

ಈಕೆ ನನ್ನ ಹೆಂಡತಿ. ಇವಳ ಹೆಸರು ಗೂಗಲ್ ಗಾಯಿತ್ರಿ ಅಂತಾ.. ನೀವೇನಾದ್ರು ಕೇಳಿದ್ರೆ ಅದಕ್ಕೆ ಸಂಬಂಧಿಸಿದ್ದು, ಸಂಬಂಧವಿಲ್ಲದ್ದು ಎಲ್ಲವನ್ನೂ ಹೇಳಿ ಬಿಡ್ತಾಳೆ. ಇವನು ನನ್ನ ಮಗ ಫೇಸ್ ಬುಕ್ ಪಾಲಾಕ್ಷ. ನಮ್ಮ ಮನೆಯಲ್ಲಿ ನಡೆಯುವುದೆಲ್ಲವನ್ನೂ ಏರಿಯಾದ ಎಲ್ಲರಿಗೂ ತಿಳಿಸುತ್ತಾನೆ. ಇವಳು ನನ್ನ ಮಗಳು ಟ್ವಿಟರ್ ತಾರಾ, ಇವಳು ಹೊರಗೆ ಹೋದರೆ ಜನರೆಲ್ಲಾ ಇವಳನ್ನು ಫಾಲೋ ಮಾಡ್ತಾರೆ.

★★★

ಜಲಜಳಿಗೆ ಮದುವೆ ಗೊತ್ತಾಗಿತ್ತು. ಮದುವೆಯ ಎರಡು ದಿನ ಮೊದಲು ಅವಳ ಗೆಳತಿ ಗಿರಿಜ ಕೇಳಿದ್ಲು : ಮದುವೆಗೆ ಎಲ್ಲಾ ತಯಾರಿ ಮುಗೀತೇನೇ?

ಗಿರಿಜ: ಹಾಂ.. ಫೋನ್ ಫಾರ್ಮೆಟ್ ಮಾಡಿದ್ದೀನಿ. ಫೇಸ್‌ಬುಕ್ ನಿಷ್ಕ್ರಿಯ ಮಾಡಿದ್ದೀನಿ. ಇನ್ನು ಸಿಮ್ ಕಾರ್ಡ್ ಬದಲಾಯಿಸಬೇಕು ಅಷ್ಟೇ..!

★★★

ಗುಂಡ ಮೆಜೆಸ್ಟಿಕ್ ಬಳಿಯಿದ್ದಾಗ ಜೋರಾಗಿ ಮಳೆ ಸುರಿಯಲಾರಂಭಿಸಿತು. ಆಗಲೇ ತಡರಾತ್ರಿಯಾಗಿತ್ತು. ಮನೆಗೆ ಹೇಗೆ ಹೋಗುವುದೆಂದು ಯೋಚಿಸುತ್ತಿರುವಾಗಲೇ ಅವನಿಗೆ ವೈದ್ಯನೊಬ್ಬನ ನಾಮಫಲಕ ಕಾಣಿಸಿತು. ಮನೆಯೊಳಗೆ ಹೋದ ಗುಂಡ ತನ್ನ ಮನೆ ಇರುವುದು ರಾಜಾಜಿನಗರದಲ್ಲಿ. ಮಗ ತುಂಬಾ ಗಾಬರಿಯಲ್ಲಿದ್ದಾನೆ. ದಯವಿಟ್ಟು ಮನೆಗೆ ಬನ್ನಿ ಎಂದಾಗ ವೈದ್ಯರು ನಿಮ್ಮ ಮನೆಗೆ ಬರಲು 200 ರೂ. ಫೀಸ್ ಕೊಡಬೇಕು ಎಂದರು. ಗುಂಡ ಒಪ್ಪಿ ವೈದ್ಯರ ಕಾರಿನಲ್ಲಿಯೇ ಮನೆಯನ್ನು ತಲುಪಿ ವೈದ್ಯರಿಗೆ 200 ರೂ. ನೀಡಿ ನಮ್ಮ ಮಗನಿಗೆ ಏನೂ ಆಗಿಲ್ಲ.. ನಾನು ಬರುವುದು ತಡವಾಯಿತೆಂದು ಅವನು ಗಾಬರಿಯಾಗಿದ್ದಾನಷ್ಟೇ. ಅಲ್ಲಿಂದ ಬರಲು ಆಟೋದವರು 300 ರೂ. ಕೇಳಿದರು. ಅದಕ್ಕೇ ನಾನು ನಿಮ್ಮ ಕಾರಿನಲ್ಲಿ ಬಂದೆ ಎಂದು ವೈದ್ಯರಿಗೆ ಧನ್ಯವಾದ ಹೇಳಿ ಒಳಗೆ ಹೋದ.

★★★

ಗುಂಡ ಉದ್ಯೋಗವಿಲ್ಲದೇ ಅಲೆದಾಡುತ್ತಿರುವಾಗ ಸರ್ಕಸ್ ಕಂಪೆನಿಯೊಂದರಲ್ಲಿ ಕೆಲಸ ಕೊಡುವುದಾಗಿ ಹೇಳಿ ಸೇರಿಸಿಕೊಂಡರು. ಅಲ್ಲಿ ಅವನಿಗೆ ಕೋತಿಯ ಡ್ರೆಸ್ ಹಾಕಿ ಜಿಗಿದಾಟವಾಡಿ ಮಕ್ಕಳನ್ನು ರಂಜಿಸುವ ಕೆಲಸ ನೀಡಲಾಯಿತು. ಹೀಗೇ ಸಾಗುತ್ತಿರುವಾಗ ಒಮ್ಮೆ ಪ್ರದರ್ಶನ ನೀಡುತ್ತಿರುವಾಗ ಅವನು ಆಯತಪ್ಪಿ ಹುಲಿಯ ಬೋನಿನೊಳಗೆ ಬಿದ್ದುಬಿಟ್ಟ. ಗುಂಡನಿಗೆ ಹೃದಯ ಬಾಯಿಗೆ ಬಂದಂತಾಯ್ತು. ನಾನೇನೋ ನಕಲಿ ಕೋತಿ ಆದರೆ ಬೋನಿನೊಳಗಿರುವುದು ನಿಜವಾದ ಹುಲಿ. ಅದು ತನ್ನನ್ನು ತಿನ್ನುತ್ತದೆಯೆಂದು ಸಾಕಷ್ಟು ಹೆದರಿ ಮೂಲೆಯೊಳಗೆ ಕುಳಿತ. ಹುಲಿಯು ಅವನನ್ನು ನೋಡಿ ನಿಧಾನವಾಗಿ ಸಮೀಪ ಬಂದು ವಾಸನೆ ನೋಡಿ ಹೇಳಿತು. ಹೆದರಬೇಡ, ನಾನೂ ನಿಜವಾದ ಹುಲಿಯಲ್ಲ. ನಾನೂ ನಿನ್ನಂತೆಯೇ ವೇಷ ಹಾಕಿರುವ ಮನುಷ್ಯ!.

★★★

ಕೈಗಡಿಯಾರ ಖರೀದಿಸಲು ಗುಂಡ ವಾಚ್ ಅಂಗಡಿಗೆ ಬಂದು ಒಂದು ವಾಚ್ ಆಯ್ಕೆ ಮಾಡಿಕೊಂಡ. ಅದರ ಬೆಲೆ 1000ರೂ. ಎಂದಾಗ ಗುಂಡ ಸ್ವಲ್ಪ ಕಡಿಮೆ ಮಾಡಿಕೊಳ್ಳಿ ಎಂದ. ಅದಕ್ಕೆ ಅಂಗಡಿಯವನು ನಾವು ಖರೀದಿಸಿದ ಬೆಲೆಗೇ ಮಾರುವುದು ಎಂದಾಗ, ಗುಂಡ ಹಾಗಾದರೆ ನಿಮಗೆ ಏನು ಲಾಭ? ಎಂದ. ಆಗ ಅಂಗಡಿಯವನು ನೀವು ಸದ್ಯದಲ್ಲೇ ಇದರ ರಿಪೇರಿಗೆ ಬರುತ್ತೀರಲ್ಲಾ. ಆಗ ನಾವು ಲಾಭ ಮಾಡ್ಕೋತೀವಿ ಎಂದು ಪ್ಯಾಕ್ ಮಾಡಿ ಕೈಗಿಟ್ಟ.

★★★



ಇಂಗ್ಲಿಷ್ ಪತ್ರಿಕೆ ಓದುತ್ತಿದ್ದ ಹೆಂಡತಿ ಸಿಡುಕಿದಳು: ರೀ.. ಕನ್ನಡದಲ್ಲಿ ಅದೆಂಥಾ ಫಿಲ್ಮ್ ತೆಗೀತಾರ್‍ರೀ..! ಇಲ್ಲಿ ನೋಡಿ– ಈ ಕನ್ನಡ ಸಿನಿಮಾದ ಹೆಸರು 'ಬೀಡಿ ಸೇದಿ ಬಂದ' ಅಂತ!

ಗಂಡ: ಸರಿಯಾಗಿ ಓದೇ.. ಅದು 'ಬಿಡಿಸದ ಬಂಧ!'

★★★

(ಸಂಗ್ರಹ) ಪ.ನಾ.ಹಳ್ಳಿ.ಹರೀಶ್ ಕುಮಾರ್